## COTTON GROWING AREAS IN RAICHUR DISTRICT

236. SRI C. N. PATIL (Lingsugur).

Will the Minister for Agriculture and Forests be pleased to state :—

(*a*) the anticipated area in Raichur District. for cotton growing for the year 1972–73 ;

(*b*) the areas under irrigation and non-irrigation in acres indicating different varieties of land ;

(*c*) the total expected yield of cotton for the year 1972–73 ;

(*d*) the marketing facilities to be created during the year in 1972–73 ;

(*e*) whether there is a scheme before Government to supply of savin dust and savin liquid and other important insecticides on subsidy basis ,

(*f*) if so, the amount of subsidy ,

(*g*) whether any amount is earmarked for subsidising the above items for Raichur District Cotton Growers ?

SRI K. H. PATIL (Minister for Agriculture and Forests).—

(*a*) 2,80,000 Hectares.

(*b*) I. Rainfed : 2,40,000 Hectares

| | | | |
|---|---|---|---|
| 1. | Lakshmi | ... | 1,75,370 Hectares |
| 2. | Jayadhar | ... | 60,630 ,, |
| 3. | Raichur-31 | ... | 4,000 ,, |
| | | | 2,40,000 ,, |

The above area is cultivated in Black Cotton Soils.

II. Irrigated : 40,000 Hectares

| | | | |
|---|---|---|---|
| 1. | Hampi | ... | 30,000 Hectares |
| 2. | Hybrid-4 | ... | 10,000 ,, |
| | | | 40,000 ,, |

Irrigated cotton is grown both in red and black cotton soils.

(*c*) 1,86,666 bales.

(SRI C. N. PATIL)

(*d*) The Cotton Corporation of India Ltd., and Mysore State Co-operative Marketing Federation Ltd., are purchasing Cotton in these areas during the year 1972-73.

(*e*) Yes.

(*f*) The Government of India have sanctioned a scheme for distribution of pesticides and equipments at 25 per cent subsidised rate at a total cost of Rs. 1,75,000 in Tungabhadra Project area during 1972-73.

(*g*) Tentatively Rs. 1,25,000 is provided to Raichur District.

ಶ್ರೀ ಸಿ. ಎನ್. ಪಾಟೀಲ್ :—ರಾಯಚೂರು ಜಿಲ್ಲೆಯಲ್ಲಿ ಸುಮಾರು ೧,೪೬,೬೬೬ ಬೇಲ್‌ಸಿ ಹತ್ತಿ ಬೆಳೆಯುತ್ತದೆ ಎಂದು (ಈ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದೀರಿ ಇದರಲ್ಲಿ ಈ ವರ್ಷ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ೬ ಸಾವಿರ ಬೇಲು ಹತ್ತಿಯನ್ನು ಮಾತ್ರ ತೆಗೆದುಕೊಂಡಿದ್ದಾರೆ. ಹೀಗಿರುವಾಗ ಅವರು ಸಮಂಜಸವಾಗಿ ಕೆಲಸ ಮಾಡುತ್ತಾರೆ ಎಂದು ತಮಗೆ ಅನಿಸುತ್ತದೆಯೇ, ಮತ್ತು ಅಲ್ಲಿ ಮಾರ್ಕೆಟಿಂಗ್ ಫೆಸಿಲಿಟಿ ಸರಿಯಾಗಿ ಇದೆಯೆಂದು ತಾವು ಭಾವಿಸುತ್ತೀರಾ ?

‡ ಶ್ರೀ ಕೆ. ಎಚ್. ಪಾಟೀಲ್ : ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಮಾಡಿರುವ ಕಾರ್ಯ ಸಮಂಜಸವಾಗಿಲ್ಲ. ಅದಕ್ಕೋಸ್ಕರ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ತಮ್ಮ ಶಕ್ತಿಯನ್ನು ಹೆಚ್ಚು ಬಳಸಿಕೊಂಡರೆ ಅದರಿಂದ ಜನಗಳಿಗೆ ಅನುಕೂಲವಾಗುತ್ತದೆ ಎಂದು ನಾವು ಅವರಿಗೆ ಹೇಳಿದ್ದೇವೆ. ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಕಾರ್ಖಾನೆಗಳಿಗೆ ಸರ್ಕಾರದವರು ಸಹಾಯಧನ ರೂಪದಲ್ಲಿ ಹಣ ಕೊಟ್ಟು ಅವರು ಮುಂಜಾಗರೂಕತೆಯಿಂದ ಕೆಲಸ ಮಾಡಬೇಕೆಂದು ನಾವು ಅವರಿಗೆ ಹೇಳಿದ್ದೇವೆ.

ಶ್ರೀ ಸಿ. ಎನ್. ಪಾಟೀಲ್ :—ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ರಾಯಚೂರು ಜಿಲ್ಲೆಯಲ್ಲಿರುವ ೫೧ ಸೊಸೈಟಿಗಳ ಪೈಕಿ ಒಂದು ಸೊಸೈಟಿಗೆ ಮಾತ್ರ ಹತ್ತಿಯಮ್ಮ ಖರೀದಿ ಮಾಡಲು ಲೈಸೆನ್ಸ್ ಕೊಟ್ಟಿದ್ದಾರೆ. ಆದೋನಿಯಲ್ಲಿ ಒಂದು ಪ್ರೈವೇಟ್ ಏಜೆನ್ಸಿಗೆ ಹತ್ತಿ ಖರೀದಿ ಮಾಡಲು ಲೈಸೆನ್ಸ್ ಕೊಟ್ಟಿದ್ದಾರೆ. ಇದರಿಂದ ಅಲ್ಲಿ ಹತ್ತಿ ಬೆಳೆಯಂತಕ್ಕ ರೈತರಿಗೆ ಸಾಕಷ್ಟು ಮಾರ್ಕೆಟಿಂಗ್ ಫೆಸಿಲಿಟೀಸ್ ಇಲ್ಲದಂತಾಗಿದೆ. ಆದ್ದರಿಂದ ತಾವು ಈ ಬಗ್ಗೆ ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ಮುಂದಿನ ವರ್ಷ ಹತ್ತಿ ಬೆಳೆಯುವ ರೈತರಿಗೆ ಒಳ್ಳೆಯ ಬೆಲೆಯಂ ಸಿಕ್ಕುವ ಹಾಗೆ ಸರಿಯಾದ ಮಾರ್ಕೆಟಿಂಗ್ ವ್ಯವಸ್ಥೆ ಸಿಕ್ಕುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್ :—ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಇಂತಿಂಥಾ ಸೊಸೈಟಿಗಳವರನ್ನೇ ನೀವು ಏಜನ್ಸಿಯಾಗಿ ತೆಗೆದುಕೊಳ್ಳಿ ಎಂದು ಹೇಳುವುದಕ್ಕಾಗುವುದಿಲ್ಲ. ಇಲ್ಲಿರತಕ್ಕ ಸೊಸೈಟಿಗಳವರಿಂದ ನೀವು ಮಾಲನ್ನು ಖರೀದಿ ಮಾಡಿ ಎಂದು ನಾವು ಅವರಿಗೆ ಹೇಳಬಹುದು.

ಶ್ರೀ ಸಿ. ಎನ್. ಪಾಟೀಲ್ :—ಈಗ ನಮ್ಮ ರಾಯಚೂರು ಜಿಲ್ಲೆಯಲ್ಲಿ ಸ್ವಲ್ಪ ಹೆಚ್ಚು ಹತ್ತಿಯನ್ನು ಬೆಳೆಯುತ್ತಿದ್ದಾರೆ. ಆದರೆ ರೈತರಿಗೆ ಗೊಬ್ಬರ ಮತ್ತು ಇನ್‌ಸೆಕ್ಟಿಸೈಡ್ಸ್‌ಗಳ ಕೊರತೆ ಉಂಟಾಗಿದೆ. ಆದ್ದರಿಂದ ಮುಂದಿನ ಹತ್ತಿ ಬೆಳೆಯುವ ಸೀಜನ್ನಿಗೆ ಗೊಬ್ಬರ ಮತ್ತು ಇನ್‌ಸೆಕ್ಟಿಸೈಡ್‌ಗಳ ಕೊರತೆ ಬಾರದ ಹಾಗೆ ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ಫೈಟೋಜನ್ ಫರ್ಟಿಲೈಜರ್ಸ್ ಮತ್ತು ಇನ್‌ಸೆಕ್ಟಿಸೈಡ್‌ಗಳನ್ನು ಸಾಕಷ್ಟು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :— ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಅವಶ್ಯವಾಗಿ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.